# All India Radio: Bangalore
# National Bulletin In Kannada
# 02.02.2025  19.35 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ದೆಹಲಿ ವಿಧಾನಸಭಾ ಚುನಾವಣೆ ; ವಿವಿಧ ಪಕ್ಷಗಳ ನಾಯಕರಿಂದ ಬಿರುಸಿನ ಪ್ರಚಾರ
2. ಆಳ ಸಮುದ್ರದ ಅಧ್ಯಯನಕ್ಕಾಗಿ ಕೇಂದ್ರ ಬಜೆಟ್‌ನಲ್ಲಿ ೬೦೦ ಕೋಟಿ ರೂಪಾಯಿ ಮೀಸಲು
3. ಮಹಾಕುಂಭಮೇಳ ಕಾಲ್ತುಳಿತ ಪ್ರಕರಣ ; ನಾಳೆ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ
4. ೧೯ ವರ್ಷದೊಳಗಿನ ಮಹಿಳಾ ಕ್ರಿಕೆಟ್ ; ಭಾರತ ತಂಡಕ್ಕೆ ಐಸಿಸಿ ಟಿ-೨೦ ವಿಶ್ವಕಪ್ ಕಿರೀಟ

<><><><>

ದೆಹಲಿ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಹಿರಂಗ ಪ್ರಚಾರ ನಾಳೆ ಸಂಜೆ ಅಂತ್ಯಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳ ಪ್ರಾಚಾರೋಂದಲನ ಚುರುಕು ಪಡೆದಿದೆ. ಆಮ್ ಆದ್ಮಿ, ಕಾಂಗ್ರೆಸ್ ಮತ್ತು ಬಿಜೆಪಿಯ ಪ್ರಮುಖ ಧುರೀಣರು ಒಂದೊರ ಮೇಲೊಂದರಂತೆ ಹಲವಾರು ಕ್ಷೇತ್ರಗಳಲ್ಲಿ ಪ್ರಚಾರದಲ್ಲಿ ತೊಡಗಿದ್ದಾರೆ. ಬಿಜೆಪಿಯ ಹಿರಿಯ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಇಂದು ಮಧ್ಯಾಹ್ನ ದೆಹಲಿಯ ಆರ್.ಕೆ.ಪುರಂನಲ್ಲಿ ಚನಾವಣಾ ಸಮಾವೇಶ ಉದ್ದೇಶಿಸಿ ಮಾತನಾಡಿ, ಒತ್ತಡದಲ್ಲಿರುವ ಆಮ್ ಆದ್ಮಿ ಪಕ್ಷವು ಗಂಟೆಗೊಂದರಂತೆ ಹೊಸ ನೀತಿಗಳನ್ನು ಘೋಷಿಸುತ್ತಿದೆ. ೧೧ ವರ್ಷಗಳನ್ನು ಆಪ್ ಸರ್ಕಾರ ವ್ಯರ್ಥ ಮಾಡಿದೆ ಎಂದು ಟೀಕಿಸಿದರು. ರಾಜ್ಯದ ಎಲ್ಲ ವರ್ಗಗಳ ಏಳಿಗೆಗೆ ಡಬಲ್ ಎಂಜಿನ್ ಸರ್ಕಾರ ಶ್ರಮಿಸಲಿದೆ ಎಂದು ಪ್ರಧಾನಿ ಹೇಳಿದರು. ಇದೇ ವೇಳೆ ಬಿಜೆಪಿ ಹಿರಿಯ ನಾಯಕ ಅಶ್ವಿನಿ ವೈಷ್ಣವ್, ಮನೆ ಮನೆಗಳಿಗೆ ತೆರಳಿ ಪ್ರಚಾರ ಕೈಗೊಂಡರು. ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೆಹಲಿಯ ಸಂಸ್ಕೃತಿ ಮತ್ತು ಪರಂಪರೆಯನ್ನು ಮರುನಿರ್ಮಾಣ ಮಾಡಬೇಕಿದೆ ಎಂದರು.  ಪಕ್ಷದ ಹಿರಿಯ ಧುರೀಣ ರಾಜನಾಥ್ ಸಿಂಗ್ ಹಲವು ಕ್ಷೇತ್ರಗಳಲ್ಲಿ ಪ್ರಚಾರ ಕೈಗೊಂಡರು.  ಇನ್ನೊಂದೆಡೆ, ಆಮ್ ಆದ್ಮಿ ಪಕ್ಷದ ಸಂಚಾಲಕ, ಅರವಿಂದ್ ಕೇಜ್ರಿವಾಲ್ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ

ಬರೆದಿದ್ದು, ತಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿರುವ ಬಿಜೆಪಿ ಕಾರ್ಯಕರ್ತರ ಮತ್ತು ದೆಹಲಿ ಪೊಲೀಸರ ಮೇಲೆ ಕ್ರಮ ಜರುಗಿಸುವಂತೆ ಆಗ್ರಹಿಸಿದ್ದಾರೆ. ೭೦ ಸದಸ್ಯರ ದೆಹಲಿ ವಿಧಾನಸಭೆಗೆ ಬುಧವಾರ ಚುನಾವಣೆ ನಡೆಯಲಿದ್ದು, ಇದೇ ೮ ರಂದು ಮತ ಎಣಿಕೆ ನಡೆಯಲಿದೆ.

<><><><>

ಇಂಡೋನೇಷ್ಯಾದ ಜಕಾರ್ತದಲ್ಲಿ ಇಂದು ಶ್ರೀ ಸನಾತನ ಧರ್ಮ ದೇವಾಲಯದ ಮಹಾ ಕುಂಭಾಭಿಷೇಕ ಜರುಗಿತು. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ, ಭಾರತ ಮತ್ತು ಇಂಡೋನೇಷ್ಯಾ ಸಂಬಂಧಗಳು ಸಾವಿರಾರು ವರ್ಷಗಳ ಹಿಂದಿನವು. ಸಂಸ್ಕೃತಿ, ನಾಗರಿಕತೆ ಮತ್ತು ಆಧ್ಯಾತ್ಮಿಕತೆಯ ಮೂಲಕ ಉಭಯ ದೇಶಗಳು ಸಂಪರ್ಕ ಹೊಂದಿವೆ ಎಂದು ಹೇಳಿದರು. ಪ್ರಂಬನನ್ ದೇವಾಲಯದಂತಹ ಇಂಡೋನೇಷ್ಯಾದ ದೇವಾಲಯಗಳಿಗೆ ಭಾರತೀಯರು ಭೇಟಿ ನೀಡಿದಾಗಲೆಲ್ಲಾ ಕಾಶಿ ಮತ್ತು ಕೇದಾರನಾಥ ದೇವಾಲಯಗಳು ನೆನಪಾಗುತ್ತದೆ ಎಂದು ಅವರು ಸ್ಮರಿಸಿದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ**

<><><><>

ಆಳ ಸಮುದ್ರದ ಕಾರ್ಯಾಚರಣೆಗಾಗಿ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ೬೦೦ ಕೋಟಿ ರೂಪಾಯಿ ಮೀಸಲಿಟ್ಟಿರುವುದರಿಂದ, ಭಾರತದ ವಿಜ್ಞಾನಿಗಳು ಅಭಿವೃದ್ಧಿಪಡಿಸುತ್ತಿರುವ ಮಹತ್ವಾಕಾಂಕ್ಷಿ ಆಳ ಸಮುದ್ರದ ಅಧ್ಯಯನಕ್ಕೆ ಪ್ರೋತ್ಸಾಹ ದೊರೆತಿದೆ. ಈ ಯೋಜನೆ, ಸಮುದ್ರತಳದ ಹಾಸನ್ನು ನಿಖರವಾಗಿ ಅಳೆಯುವುದರ ಜೊತೆಗೆ, ೬ ಸಾವಿರ ಮೀಟರ್ ಆಳದಲ್ಲಿ ಮಾನವಸಹಿತ ಸಬ್‌ಮರ್ಸಿಬಲ್ ತಂತ್ರಜ್ಞಾನವನ್ನು ಅನುಷ್ಠಾನಗೊಳಿಸುವ ಉದ್ದೇಶ ಹೊಂದಿದೆ. ಅಲ್ಲದೇ, ಸಮುದ್ರತಳದ ಸ್ವಾಭಾವಿಕ ಸಂಪನ್ಮೂಲಗಳ ಅನ್ವೇಷಣೆ ಮತ್ತು ತೀರದ ಮೇಲಿನ ಲವಣರಹಿತ ಜಲಉತ್ಪಾದನೆಯ ಉಷ್ಣಶಕ್ತಿ ಸ್ಥಾವರಗಳಿಗೆ ಸಹಾಯಕವಾಗಲಿದೆ. ಚೆನ್ನೈಲ್ಲಿರುವ ಸಮುದ್ರ ಅಧ್ಯಯನಕ್ಕಾಗಿನ ರಾಷ್ಟ್ರೀಯ ಸಂಸ್ಥೆ-ಎನ್‌ಐಓಟಿ ನಿರ್ಮಿಸಲಿರುವ ೫೦೦ ಮೀಟರ್ ಆಳಕ್ಕೆ ತಲುಪಬಲ್ಲ ಜಲಂತರ್ಗಾಮಿ ನೌಕೆಗೆ ಇದೇ ವರ್ಷದ ಅಂತ್ಯದಲ್ಲಿ ಭಾರತ ಚಾಲನೆ ನೀಡಲಿದೆ. ಇದರ ಜೊತೆಗೆ ಈ ಬಾರಿಯ ಬಜೆಟ್‌ನಲ್ಲಿ, ಹವಾಮಾನ ವರದಿ ಸಾಧ್ಯತೆಗಳನ್ನು ಸುಧಾರಿಸುವಂತಹ ಯೋಜನೆ 'ಮಿಷನ್ ಮೌಸಮ್'ಗೆ ೧ ಸಾವಿರದ ೩೨೯ ಕೋಟಿ

ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. ಭೂವಿಜ್ಞಾನಗಳ ಸಚಿವಾಲಯಕ್ಕೆ ಸುಮಾರು ೩ ಸಾವಿರದ ೬೫೦ ಕೋಟಿ ರೂಪಾಯಿ ಅನುದಾನ ದೊರೆತಿದೆ.

<><><><>

ಇಂದು ವಸಂತ ಪಂಚಮಿ ಮತ್ತು ಸರಸ್ವತಿ ಪೂಜೆಯ ದಿನ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಜನತೆಗೆ ಶುಭಾಶಯ ಕೋರಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ರಾಷ್ಟ್ರಪತಿಗಳು, ಶಿಕ್ಷಣ ಮತ್ತು ಜ್ಞಾನದೊಂದಿಗೆ ಸಂಬಂಧ ಹೊಂದಿರುವ ಈ ಸಂತೋಷದಾಯಕ ಸಂದರ್ಭವು ದೇಶದ ಎಲ್ಲಾ ನಾಗರಿಕರಿಗೆ ಸಂತೋಷ, ಸಮೃದ್ಧಿ ಮತ್ತು ಬುದ್ಧಿವಂತಿಕೆಯನ್ನು ತರಲಿ. ಭಾರತ ವಿಶ್ವದ ಜ್ಞಾನ ಕೇಂದ್ರವಾಗಿ ಹೊರಹೊಮ್ಮಲಿದೆ ಎಂದು ಹಾರೈಸಿದ್ದಾರೆ.

<><><><>

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಭಕ್ತ ಸಾಗರವೇ ಹರಿದು ಬರುತ್ತಿದೆ.

ವಸಂತ ಪಂಚಮಿಯ ದಿನವಾದ ಇಂದು ಮೂರನೇ ಅಮೃತ ಸ್ನಾನ ನಡೆಯಿತು. ಲಕ್ಷಾಂತರ ಭಕ್ತರು ಗಂಗಾ, ಯುಮುನಾ, ಸರಸ್ವತಿಯ ತ್ರಿವೇಣಿ ಸಂಗಮದಲ್ಲಿ ಮಿಂದರು. ಮೊದಲ ಮತ್ತು ಎರಡನೇ ಅಮೃತಸ್ನಾನ ಮಕರ ಸಂಕ್ರಾಂತಿ ಹಾಗೂ ಮೌನಿ ಅಮಾವಾಸ್ಯೆಯಂದು ನಡೆದಿತ್ತು. ಈಗ ವಸಂತ ಪಂಚಮಿಯಂದು ಮೂರನೇ ಅಮೃತ ಸ್ನಾನ ನಡೆಯಿತು. ಭಾರೀ ಸಂಖ್ಯೆಯಲ್ಲಿ ಭಕ್ತರು ಬರುತ್ತಿರುವುದರಿಂದ ತ್ರಿವೇಣಿ ಸಂಗಮದಲ್ಲಿ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ.

<><><><>

ಕಳೆದ ಬುಧವಾರ ಕಾಲ್ತುಳಿತದಿಂದ ೩೦ ಭಕ್ತರು ಸಾವಿಗೀಡಾಗಿ, ೬೦ ಜನರು ಗಾಯಗೊಂಡ ಮಹಾಕುಂಭಮೇಳದ ಘಟನೆ ಸಂಬಂಧಿತ ಭಕ್ತಾದಿಗಳ ಭದ್ರತೆಗಾಗಿ ನಿರ್ದಿಷ್ಟ ಮಾನದಂಡಗಳ ಅನುಷ್ಠಾನಕ್ಕಾಗಿ ಒತ್ತಾಯಿಸಿ ಸಲ್ಲಿಸಲಾಗಿರುವ ಮನವಿಯನ್ನು ಸುಪ್ರೀಂ ಕೋರ್ಟ್ ನಾಳೆ ಆಲಿಸಲಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರೊನ್ನೊಳಗೊಂಡ ನ್ಯಾಯಪೀಠ, ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪರಿಶೀಲಿಸಲಿದೆ. ಸಂವಿಧಾನದ ೨೧ನೇ ಕಲ್‌ಂನಡಿಯ ರಕ್ಷಣೆ, ಸಮಾನತೆ ಮತ್ತು ಜೀವನದ ಮೂಲಭೂತ ಹಕ್ಕುಗಳನ್ನು ಉಲ್ಲೇಖಿಸಿ, ಈ ಸಾರ್ವಜನಿಕ ಹಿತಾಸಕ್ತಿ

ಅರ್ಜಿಯನ್ನು ಸಲ್ಲಿಸಲಾಗಿದೆ. ಪ್ರಯಾಗ್‌ರಾಜ್‌ನಲ್ಲಿ ಭಕ್ತಾದಿಗಳ ಸೌಲಭ್ಯ ಕೇಂದ್ರಗಳನ್ನು ಸಂಬಂಧಿತ ಎಲ್ಲಾ ರಾಜ್ಯಗಳು ನಿರ್ಮಿಸಬೇಕು. ಅಲ್ಲದೇ ಎಲ್ಲಾ ಭಾಷೆಗಳಲ್ಲೂ ಘೋಷಣೆ ಮತ್ತು ಸಂಬಂಧಿತ ಸಲಹೆಗಳನ್ನು ಭಿತ್ತರಿಸುವ ವ್ಯವಸ್ಥೆಯಾಗಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ವಿಶೇಷ ಅತಿಥಿ ಅಥವಾ ಗಣ್ಯರ ಆಗಮಿಸುವಾಗ ಜನಸಂದಣಿ-ನೂಕುನುಗ್ಗಲು ತಡೆಯಲು ಜನರ ಸುರಕ್ಷತೆಯನ್ನು ಪ್ರಮುಖವಾಗಿಸಿ ಜನಕೇಂದ್ರಿತ ನೀತಿಗಳನ್ನು ರೂಪಿಸಬೇಕು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

<><><><>

೨೦೨೫ರ ಜನವರಿಯಲ್ಲಿ ಒಟ್ಟು ಸರಕು ಮತ್ತು ಸೇವಾ ತೆರಿಗೆ ಆದಾಯ ೧.೯೫ ಲಕ್ಷ ಕೋಟಿ ರೂಪಾಯಿ ಸಂಗ್ರಹವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇಕಡ ೧೨.೩ ರಷ್ಟು ಬೆಳವಣಿಗೆ ಕಂಡಿದೆ. ಜನವರಿಯಲ್ಲಿ ಕೇಂದ್ರ ಜಿಎಸ್‌ಟಿ ೩೮ ಸಾವಿರದ ೭೭ ಕೋಟಿ ರೂಪಾಯಿ ಮತ್ತು ರಾಜ್ಯ ಜಿಎಸ್‌ಟಿ ೪೪ ಸಾವಿರದ ೯೪೨ ಕೋಟಿ ರೂಪಾಯಿ ಸಂಗ್ರಹ ಆಗಿದೆ. ಸಂಯೋಜಿತ ಐಜಿಎಸ್‌ಟಿ ೧ ಲಕ್ಷ ಕೋಟಿ ಮತ್ತು ಸೆಸ್ ೧೩ ಸಾವಿರದ ೪೧೨ ಕೋಟಿ ರೂಪಾಯಿಗಳಷ್ಟಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಲಡಾಖ್ ಶೇಖಡ ೩೯ ರಷ್ಟು ಬೆಳವಣಿಗೆ ಕಂಡಿದ್ದು, ನಾಗಾಲ್ಯಾಂಡ್, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ತಲಾ ಶೇಖಡ ೨೮ ರಷ್ಟು ಹೆಚ್ಚಳ ಕಂಡಿದೆ.

<><><><>

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್, ಇದೇ ೪ ರಿಂದ ೮ ರವರೆಗೆ ಭಾರತಕ್ಕೆ ಪ್ರವಾಸ ಕೈಗೊಳ್ಳಲಿದ್ದಾರೆ. ಭೇಟಿಗೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಫಿಲೆಮನ್ ಯಾಂಗ್, ಕಳೆದ ದಶಕದಲ್ಲಿ ಭಾರತವು ಗಮನಾರ್ಹ ಪ್ರಗತಿ ಕಂಡಿದೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ, ೫ನೇ ಅತಿದೊಡ್ಡ ಆರ್ಥಿಕತೆ ಮತ್ತು ವಿಶ್ವದ ೫ನೇ ಒಂದು ಭಾಗದಷ್ಟು ಜನಸಂಖ್ಯೆ ಇರುವ ಭಾರತವು ವಿಶ್ವಸಂಸ್ಥೆಯ ಪ್ರಮುಖ ಸದಸ್ಯರ ರಾಷ್ಟ್ರವಾಗಿದೆ ಎಂದು ಹೇಳಿದ್ದಾರೆ. ಭೇಟಿಯ ಸಮಯದಲ್ಲಿ ಭವಿಷ್ಯದ ಬಗ್ಗೆ ಭಾರತದ ಆದ್ಯತೆಗಳು ಮತ್ತು ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳಲು ಎದುರು ನೋಡುತ್ತಿದ್ದೇನೆ ಎಂದು ಅವರು ತಿಳಿಸಿದ್ದಾರೆ.

<><><><>

ಭಾರತದ ಸಿನಿಮಾಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸುತ್ತಿದ್ದು, ಹಾಲಿವುಡ್ ಸಿನಿಮಾಗಳಿಗೆ ಪೈಪೋಟಿ ನೀಡುವ ಮಟ್ಟಕ್ಕೆ ಬೆಳೆದು ನಿಂತಿದೆ ಎಂದು ಕೇಂದ್ರ ವಾರ್ತಾ ಮತ್ತು

ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್ ಅಭಿಪ್ರಾಯಪಟ್ಟಿದ್ದಾರೆ. ಮೈಸೂರು ಮುಕ್ತ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಇಂದು ನಡೆದ 'ಪರಿದೃಶ್ಯ- ಅಂತಾರಾಷ್ಟ್ರೀಯ ಕಿರುಚಿತ್ರ ಹಾಗೂ ಸಾಕ್ಷ್ಯಚಿತ್ರ' ಹಬ್ಬದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಹಿಂದೆ ಸಿನಿಮಾ ಶೂಟಿಂಗ್ ಮಾಡಲು ಅನುಮತಿಗಾಗಿ ಎಲ್ಲ ಕಡೆಗಳಿಗೂ ತೆರಳಬೇಕಿತ್ತು. ಆದರೆ ಇಂದು ಒಂದು ಇ-ಮೇಲ್ ಮಾಡಿದರೆ ಸಾಕು, ಅನುಮತಿ ದೊರೆಯುವಂತಹ ವಾತವರಣವಿದೆ ಎಂದರು.

**ಧ್ವನಿ : ಡಾ. ಎಲ್. ಮುರುಗನ್**

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮೆಕ್ಸಿಕೋ, ಕೆನಡಾ ಹಾಗೂ ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಸುಂಕ ವಿಧಿಸಿದ್ದಾರೆ. ಈ ಸಂಬಂಧ ಮೂರು ಕಾರ್ಯಕಾರಿ ಆದೇಶಗಳಿಗೆ ಟ್ರಂಪ್ ಸಹಿ ಹಾಕುವ ಮೂಲಕ ಅಮೆರಿಕದ ಪ್ರಮುಖ ಮೂರು ವ್ಯಾಪಾರ ಪಾಲುದಾರರ ಮೇಲೆ ಸುಂಕ ವಿಧಿಸಿದ್ದಾರೆ. ಮೆಕ್ಸಿಕೋದ ಸರಕುಗಳ ಮೇಲೆ ಶೇಕಡ ೨೫ ರಷ್ಟು ಸುಂಕವನ್ನು ವಿಧಿಸಿದರೆ, ಕೆನಡಾದ ಸರಕುಗಳ ಮೇಲೆ ಶೇಕಡ ೨೫ ರಷ್ಟು, ಕೆನಡಾದ ಇಂಧನ ಮೂಲಗಳ ಮೇಲೆ ಶೇಕಡ ೧೦ ರಷ್ಟು ಸುಂಕವನ್ನು ವಿಧಿಸಿದ್ದಾರೆ. ಮೂರನೇ ಕಾರ್ಯಕಾರಿ ಆದೇಶದಲ್ಲಿ ಚೀನಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಹೆಚ್ಚುವರಿಯಾಗಿ ಶೇಕಡ ೧೦ ರಷ್ಟು ಸುಂಕವನ್ನು ವಿಧಿಸಲಾಗಿದೆ. ಅಮೆರಿಕದ ಉತ್ತರ ಹಾಗೂ ದಕ್ಷಿಣ ಗಡಿಗಳಲ್ಲಿ ಅಕ್ರಮ ವಲಸಿಗರು ಮತ್ತು ಮಾದಕವಸ್ತುಗಳ ಕಳ್ಳಸಾಗಣೆಯನ್ನು ತಡೆಯುವ ಪ್ರಯತ್ನವಾಗಿ ಈ ಕ್ರಮಗಳನ್ನು ಕೈಗೊಳ್ಳುತ್ತಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಆಮದು ಸುಂಕಗಳಿಗೆ ಪ್ರತಿಯಾಗಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ, ತಮ್ಮ ದೇಶಕ್ಕೆ ಆಮದಾಗುವ ೧೫೫ ಶತಕೋಟಿ ಡಾಲರ್ ಮೌಲ್ಯದ ಅಮೆರಿಕದ ಸರಕುಗಳಿಗೆ ಶೇಕಡ ೨೫ ರಷ್ಟು ಸುಂಕವನ್ನು ಘೋಷಿಸಿದ್ದಾರೆ. ಒಟ್ಟಾವದಲ್ಲಿ ಪ್ರತಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಇದೇ ಮಂಗಳವಾರದಂದು ೩೦ ಶತ ಕೋಟಿ ಡಾಲರ್ ಮೌಲ್ಯದ ಅಮೆರಿಕ ಸರಕುಗಳಿಗೆ ಶೇಕಡ ೨೫ ರಷ್ಟು ಸುಂಕ ವಿಧಿಸುವುದಾಗಿ ಹಾಗೂ

ಮುಂದಿನ ೨೧ ದಿನಗಳಲ್ಲಿ ೧೨೫ ಶತಕೋಟಿ ಡಾಲರ್ ಮೌಲ್ಯದ ಅಮೆರಿಕದ ಸರಕುಗಳ ಮೇಲೆ ಇದೇ ರೀತಿಯ ಸುಂಕವನ್ನು ವಿಧಿಸುವುದಾಗಿ ತಿಳಿಸಿದ್ದಾರೆ.

<><><><>

ಮಲೇಷಿಯಾದ ಕೌಲಾಲಂಪುರದಲ್ಲಿ ನಡೆಯುತ್ತಿರುವ ೧೯ ವರ್ಷದೊಳಗಿನವರ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ೯ ವಿಕೆಟ್‌ಗಳಿಂದ ಭರ್ಜರಿ ಜಯ ದಾಖಲಿಸಿದೆ. ಈ ಮೂಲಕ ಭಾರತದ ವನಿತೆಯರು, ಸತತ ಎರಡನೇ ಬಾರಿಗೆ ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ. ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ, ನಿಗದಿತ ೨೦ ಓವರ್‌ಗಳಲ್ಲಿ ೮೨ ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>